**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

## ಸಿ.ಸಿ.ನಂ.*875/2018*

**ದಿನಾಂಕಃ *23*ನೇ ಡಿಸೆಂಬರ್ *2020.***

**ಪಿರ್ಯಾದಿ** ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**-ವಿರುದ್ದ-**

**ಆರೋಪಿ/ತರುಃ**

*1.* ಶ್ರೀನಿವಾಸ ಬಿನ್ ಕಣ್ಣಪ್ಪ,
*43* ವರ್ಷ,

*2.* ಮಂಜುನಾಥ ಬಿನ್ ಅಪ್ಪಾದೊರೈ,
*51* ವರ್ಷ,

*3.* ಮನು ಬಿನ್ ಪಳನಿ,
*37* ವರ್ಷ,

*4.* ಮೋಹನ ಬಿನ್ ಕಂದಸ್ವಾಮಿ,
*44* ವರ್ಷ,

*5.* ಲಕ್ಷ್ಮೀದೀಪ ಕೋಂ ಶ್ರೀನಿವಾಸ,
*42* ವರ್ಷ,

*6.* ಮೀನಾ ಯಾನೆ ವೀಣಾ ಕೋಂ ಶೇಖರ,
*25* ವರ್ಷ,

*7.* ಭಾಗ್ಯ ಕೋಂ ಮನು,
*25* ವರ್ಷ,

ಎಲ್ಲರ ವಾಸ ದೊಡ್ಡಕುಂದೂರು,
ಲಕ್ಕವಳ್ಳಿ ಹೋಬಳಿ,
ತರೀಕೆರೆ ತಾಲ್ಲೂಕು.

**-:ದೋಷಾರೋಪಣೆ:-**

ಶ್ರೀ ರಾಮಮೂರ್ತಿ ಎನ್., ಬಿ.ಎ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ತರೀಕೆರೆ ಆದ ನಾನು ನಿಮ್ಮ ವಿರುದ್ದ ಮಾಡುವ ದೋಷಾರೋಪಣೆಗಳೇನೆಂದರೆ:-

ದಿನಾಂಕ:*25-07-2018* ರಂದು *13-00* ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ದೊಡ್ಡಕುಂದೂರು ಗ್ರಾಮದಲ್ಲಿ ರಾಮ್ ರಾಜ್‌ರವರ ಅಂತ್ಯಕ್ರಿಯೆಯನ್ನು ಮುಗಿಸಿಕೊಂಡು ಚಾಸಾ.*1* ರಿಂದ *4* ರವರು ಮನೆಗೆ ಬಂದಾಗ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.*1* ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *448* ರ ಜೊತೆ ಸಹವಾಚಕ ಕಲಂ *149* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.*7* ಮತ್ತು *8* ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದಲ್ಲದೇ, ಆರೋಪಿ *5* ರಿಂದ *7* ರವರು ಚಾಸಾ.*2* ರಿಂದ *4* ರವರಿಗೆ ಕೈಗಳಿಂದ ಹೊಡೆದು ಬಟ್ಟೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *323* ರ ಜೊತೆ ಸಹವಾಚಕ ಕಲಂ *149* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.*1* ರಿಂದ *4* ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *504* ರ ಜೊತೆ ಸಹವಾಚಕ ಕಲಂ *149* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.*1* ರಿಂದ *8* ರವರಿಗೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *506* ರ ಜೊತೆ ಸಹವಾಚಕ ಕಲಂ *149*

ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ *1)* ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ*?*

ಉತ್ತರಃ- ಕೇಳಿದ್ದೇನೆ

ಪ್ರಶ್ನೆ *2)* ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ*?*

ಉತ್ತರಃ- ವಿಚಾರಣೆಯಾಗಬೇಕು

***ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿತರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.***

ಸಹಿ

*(*ರಾಮಮೂರ್ತಿ ಎನ್*.)*
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.